ಮೃಗಾಲಯಕ್ಕೆ ₹3 ಕೋಟಿ ದೇಣಿಗೆ

ಮೈಸೂರು: ಕರೊನಾ ಲಾಕ್‌ಡೌನ್ ಸಮಯದಲ್ಲಿ ಸಂಕಷ್ಟದಲ್ಲಿರುವ ಮೃಗಾಲಯದ ಪ್ರಾಣಿ, ಪಕ್ಷಿಗಳನ್ನು ದತ್ತು ಸ್ವೀಕರಿಸುವಂತೆ ನಟ ದರ್ಶನ್ ಮಾಡಿದ ಮನವಿಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದ್ದು, 3 ಕೋಟಿ ರೂ. ಸಂಗ್ರಹವಾಗಿದೆ.

ಪ್ರವಾಸಿಗರಿಲ್ಲದೆ ಮೃಗಾಲಯದ ಪ್ರಾಣಿ, ಪಕ್ಷಿಗಳಿಗೆ ತೊಂದರೆ ಆಗಿತ್ತು. ಇದನ್ನು ಮನಗಂಡ ನಟ ದರ್ಶನ್ ವಿಡಿಯೋ ಮೂಲಕ ಪ್ರಾಣಿ, ಪಕ್ಷಿಗಳನ್ನು ದತ್ತು ಪಡೆಯುವಂತೆ ಮನವಿ ಮಾಡಿದ್ದರು. ಅದಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ತಿಳಿಸಿದ್ದಾರೆ. 6 ಸಾವಿರಕ್ಕೂ ಅಧಿಕ ಜನರು ರಾಜ್ಯದ 9 ಮೃಗಾಲಯಗಳಲ್ಲಿ ಪ್ರಾಣಿಗಳನ್ನು ದತ್ತು ಸ್ವೀಕರಿಸಿದ್ದಾರೆ. ಇದರಿಂದ ಪ್ರಾಧಿಕಾರಕ್ಕೆ 3,12,69,430 ರೂ. ಸಂಗ್ರಹವಾಗಿದೆ. ಕೇವಲ 20 ದಿನಗಳಲ್ಲಿ ಎರಡು ಕೋಟಿ ರೂ. ದೇಣಿಗೆ ಸಂಗ್ರಹವಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘ ನಿ., ಸರ್ಜಾಪುರ–562125, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ

ಬಿ.ಎಂ.ಆರ್.ನ.10 ದಿನಾಂಕ:12–01–2021 ದೂರವಾಣಿ: 080–27823034

ನೇಮಕಾತಿ ಪ್ರಕಟಣೆ

ಸಂಘದಲ್ಲಿ ಖಾಲಿ ಇರುವ 5 (ಐದು) ಕಿರಿಯ ಸಹಾಯಕ ಕಂ ಮಾರಾಟ ಗುಮಾಸ್ತ **(Junior Assistant cum sales Clerk)** ಹುದ್ದೆಗಳನ್ನು ಭರ್ತಿ ಮಾಡಲು **ದಿನಾಂಕ:24.04.2021** ರಂದು ಸಿಬ್ಬಂದಿ ನೇಮಕಾತಿ ಪ್ರಕಟಣೆ ಹೊರಡಿಸಲಾಗಿದ್ದು, ಅರ್ಜಿ ಸಲ್ಲಿಸಲು **ದಿನಾಂಕ:24.05.2021** ರವರೆಗೆ ಕಾಲಾವಕಾಶ ನೀಡಲಾಗಿತ್ತು. ಕೋವಿಡ್–19 ರಿಂದಾಗಿ ಸರ್ಕಾರವು ಲಾಕ್‌ಡೌನ್ ಆದೇಶಿಸಿದ್ದ ಕಾರಣ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ತೊಂದರೆ ಉಂಟಾಗಿರುತ್ತದೆ. ಆದ ಕಾರಣ ಅರ್ಹ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು **ದಿನಾಂಕ: 09.07.2021 ರಂದು ಸಂಜೆ 5.00 ಘಂಟೆಯವರೆಗೆ** ಕಾಲಾವಕಾಶ ನೀಡಲಾಗಿದೆ.

ದಿನಾಂಕ : 23.06.2021
ಸ್ಥಳ : ಸರ್ಜಾಪುರ

ಸಹಿ/– ಸದಸ್ಯ ಕಾರ್ಯದರ್ಶಿ,
ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿ,
ರೇಷ್ಮೆ ಬೆಳೆಗಾರರ ಹಾಗೂ ರೈತರ ಸೇವಾ ಸಹಕಾರ ಸಂಘ ನಿ., ಸರ್ಜಾಪುರ

ಕೆನರಾ ಬ್ಯಾಂಕ್ केनरा बैंक Canara Bank
ಭಾರತ ಸರ್ಕಾರದ ಒಂದು ಉದ್ಯಮ भारत सरकार का उपक्रम A Government of India Undertaking
Syndicate
Together We Can
ಪ್ರಧಾನ ಕಛೇರಿ, ಬೆಂಗಳೂರು

ಬೇಕಾಗಿದ್ದಾರೆ

ಕೆನರಾ ಬ್ಯಾಂಕ್, ಪ್ರವರ್ತಿಸಿರುವ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕಿನ ಆರ್ಥಿಕ ಸಾಕ್ಷರತ ಕೇಂದ್ರಕ್ಕೆ ಗುತ್ತಿಗೆ ಆಧಾರದ ಮೇರೆಗ **"ಆರ್ಥಿಕ ಸಲಹೆಗಾರ"** ಹುದ್ದೆಗೆ ಬ್ಯಾಂಕಿನ ನಿವೃತ್ತ / ಸ್ವ–ಇಚ್ಛೆಯಿಂದ ನಿವೃತ್ತಿ ಹೊಂದಿದ 62 ವರ್ಷದ ಒಳಗಿನ ಪ್ರಬಂಧಕರು / ಹಿರಿಯ ಪ್ರಬಂಧಕರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿ ಮತ್ತು ನಿಬಂಧನೆಗಳಿಗೆ ಹಾಗೂ ಅರ್ಜಿ ನಮೂನೆಗಳಿಗಾಗಿ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 03.07.2021

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 98454 61668

ವ್ಯವಸ್ಥಾಪಕರು
ಕೃಷಿ ಸಾಲ ವಿಭಾಗ, ಕೆನರಾ ಬ್ಯಾಂಕ್
ಪ್ರಾದೇಶಿಕ ಕಛೇರಿ–ಪೂರ್ವ
ಸ್ಪೆನ್ಸರ್ ಟವರ್, ಎಂ.ಜಿ. ರಸ್ತೆ
ಬೆಂಗಳೂರು–560 001

ಸಹಿ/–
ಉಪ ಮಹಾಪ್ರಬಂಧಕರು
ಕೆನರಾ ಬ್ಯಾಂಕ್, ಪ್ರಾದೇಶಿಕ ಕಛೇರಿ
ಬೆಂಗಳೂರು ಪೂರ್ವ
ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ **ಹೆಚ್.ವಿ. ಗುಂಡುರಾವ್** S/o ದಿ|| ಹೆಚ್ ವೆಂಕಟರಾಮಯ್ಯ ನಂ. 216, 16ನೇ ಕ್ರಾಸ್, 5ನೇ ಮುಖ್ಯರಸ್ತೆ, ಎಂ.ಸಿ. ಬಡಾವಣೆ, ವಿಜಯನಗರ, ಬೆಂಗಳೂರು ಉತ್ತರ, ಕರ್ನಾಟಕ – 560040 ಆದ ನಾನು ಸಹಾಯಕ ಆಯುಕ್ತರು ಹಾಗೂ ಹಿರಿಯ ನಾಗರೀಕರ ನಿರ್ವಹಣೆ ಕ್ಷೇಮಾಭಿವೃದ್ಧಿ ನ್ಯಾಯ ಮಂಡಳಿ, ಬೆಂಗಳೂರು ಇವರ ಸಮ್ಮುಖದಲ್ಲಿ ನನ್ನ ಮಗಳಾದ (ಬೆಳೆಸಿದ ಮಗಳು) ಶ್ರೀಮತಿ ಅಶ್ವಿನಿ. ಕೆ. ಕುಲ್‌ಕರ್ಣಿ ಹಾಗೂ ಅವಳ ಗಂಡನಾದ ಶ್ರೀ ಕೃಷ್ಣ ಕುಲ್‌ಕರ್ಣಿ ಇಬ್ಬರೂ ನಂ. ಬಿ–201, ನಂದಿ ಡ್ರೀಮ್ ಹೋಮ್ಸ್, 6ನೇ ಕ್ರಾಸ್, 1ನೇ ಬಿ ಮುಖ್ಯರಸ್ತೆ, 9ನೇ ಬ್ಲಾಕ್ 2ನೇ ಹಂತ, ನಾಗರಭಾವಿ, ಬೆಂಗಳೂರು–560072 ಇಲ್ಲಿಯ ನಿವಾಸಿಯಾಗಿದ್ದು ಇವರ ವಿರುದ್ಧ ಸಹಾಯಕ ಆಯುಕ್ತರು ಮೂಲಕ ಪ್ರಕರಣವೊಂದನ್ನು ದಾಖಲಿಸಿದ್ದೇನೆ. ಪ್ರಕರಣದ ವಿವರವೇನೆಂದರೆ ನನ್ನ ಸ್ವಂತ ಸ್ಥಿರ ಸ್ವತ್ತಿನ ಮನೆಯ ಹೊಸ ಮುನಿಸಿಪಲ್ ನಂ. 2, ಪಿಐಡಿ ನಂ. 36–8–2, ಹಳೆಯ ನಂ. 193/ಬಿ, 17ನೇ ಕ್ರಾಸ್, ಸಿ.ಹೆಚ್.ಬಿ.ಸಿ.ಎಸ್. ಬಡಾವಣೆ, ಮಾಗಡಿ ರೋಡ್ ಕಾರ್ಡ್ ರಸ್ತೆ, ವಿಜಯನಗರ ಬಿಬಿಎಂಪಿ ಹಳೆಯ ವಾರ್ಡ್ ನಂ. 36, ಹೊಸ ವಾರ್ಡ್ ನಂ.104, ಬೆಂಗಳೂರು ಇಲ್ಲಿರುವ ನನ್ನ ಸ್ವಂತ ಮನೆಯ ಅಳತೆ **ಪೂರ್ವ–ಪಶ್ಚಿಮಕ್ಕೆ:** 34 ಅಡಿಗಳು ಅಥವಾ 10.36 ಮೀ.ಗಳು ಮತ್ತು **ಉತ್ತರ–ದಕ್ಷಿಣಕ್ಕೆ:** 52 ಅಡಿಗಳು ಅಥವಾ15.85 ಮೀ.ಗಳು ಹಾಗೂ ಇದರೊಂದಿಗೆ ನನ್ನ ಸ್ವಂತ ವಾಣಿಜ್ಯ ಸ್ವತ್ತಾದ ಒಂದು ಲಾಡ್ಜ್ ಹಾಗೂ ನಂ. 54/41 ಆರ್‌ಎಂಸಿ ಯಾರ್ಡ್, ನ್ಯೂ ಶಾಂತಿ ಸಾಗರ್, 2ನೇ ಕ್ರಾಸ್, ಲಾರಿ ಸ್ಟಾಂಡ್ ಮತ್ತು ಗೋದಾಮು, ಯಶವಂತಪುರ, ಬೆಂಗಳೂರಿನಲ್ಲಿ ರುವ ಹೋಟೆಲ್ ಸ್ವತ್ತುಗಳನ್ನು ಅವರಿಗೆ ನೀಡಿದ್ದು ಸರಿಯಷ್ಟೆ. ಕಾರಣ ನನ್ನ ಹೆಂಡತಿಯ ಮರಣಾನಂತರ ನನ್ನನ್ನು ಕ್ಷೇಮವಾಗಿ ನೋಡಿಕೊಳ್ಳುತ್ತಾರೆಂಬುವ ಕಾರಣ ಇವರಿಗೆ ಈ ಮೇಲಿನ ಎಲ್ಲಾ ಸ್ವತ್ತುಗಳನ್ನು ನೀಡಲಾಗಿತ್ತು. ಆದರೆ ಅವರುಗಳು ಕಿರುಕುಳ ನೀಡಿ ನನ್ನನ್ನು ನಿರ್ಲಕ್ಷಿಸಿದ್ದಾರೆ ಹಾಗೂ ಇದೀಗ ನಾನು ಏಕಾಂಗಿಯಾಗಿ ಜೀವನವನ್ನು ನಡೆಸಲು ಬಹಳಾ ಕಷ್ಟಪಡುತ್ತಿದ್ದೇನೆ.
ಸದರೀ ಪ್ರಕರಣವನ್ನು ಪರಿಗಣಿಸುವ ಸಲುವಾಗಿ ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿದೆ. ಹಾಗೂ ಮೇಲೆ ತಿಳಿಸಿರುವ ವಸ್ತುಸ್ಥಿತಿಯಂತೆ ನ್ಯಾಯಾಲಯದ ಪ್ರಕರಣವನ್ನೂ ಉಲ್ಲಂಘಿಸಿ ಅವರುಗಳು ಸದರೀ ಸ್ಥಿರಸ್ವತ್ತುಗಳನ್ನು ಸಹಾ ಮಾರಾಟ ಮಾಡಲು ಮುಂದಾಗಿದ್ದಾರೆ ಎಂದು ವಿಶ್ವಾಸನೀಯ ಮೂಲಗಳ ಪ್ರಕಾರ ನನಗೆ ತಿಳಿದುಬಂದಿದೆ. ಇಂತಹ ಸಂದರ್ಭದಲ್ಲಿ, ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ ಶ್ರೀಮತಿ ಅಶ್ವಿನಿ. ಕೆ. ಕುಲ್‌ಕರ್ಣಿ ಹಾಗೂ ಅವಳ ಗಂಡನಾದ ಶ್ರೀ ಕೃಷ್ಣ ಕುಲ್‌ಕರ್ಣಿ ಅಥವಾ ಬೇರೇ ಯಾವುದೇ ವ್ಯಕ್ತಿ(ಗಳ)/ಮೂಲಕ ಸದರೀ ಸ್ಥಿರ ಸ್ವತ್ತುಗಳನ್ನು ಖರೀದಿಸಬಾರದೆಂದು ತಿಳಿಸಲಾಗಿದೆ. ಇದರ ಹೊರತಾಗಿಯೂ ಒಂದು ವೇಳೆ ಯಾರಾದರೂ ಸದರೀ ಸ್ವತ್ತುಗಳನ್ನು ಖರೀದಿಸಿದರೆ, ಅಂತಹ ವ್ಯವಹಾರವು ನನಗೆ ಕಟ್ಟು ಬದ್ಧವಾಗಿಲ್ಲ ಹಾಗೂ ಅವಶ್ಯಕ ಪರಿಹಾರಕ್ಕಾಗಿ ಸದರೀ ವಿಷಯವನ್ನು ಸಹಾಯಕ ಆಯುಕ್ತರ ಗಮನಕ್ಕೆ ತರಲಾಗುವುದು ಎಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ ನೀಡಲಾಗಿದೆ.

ಸಹಿ/–
ಪುಟ್ಟರಾಮಯ್ಯ, ವಕೀಲರು ಹಾಗೂ ನೋಟರಿ
ಸಿಟಿ ಸಿವಿಲ್ ಕೋರ್ಟ್ ಕಾಂಪ್ಲೆಕ್ಸ್, ಬೆಂಗಳೂರು – 560009

ಪೊಲೀಸರಿಂದ ಆರೋಪಿ ಅಪ್ಪ, ಮಲತಾಯಿ ಸೆರೆ | ಗಾಯಾಳುಗಳಿಗೆ ವಿಕ್ಟೋರಿಯಾದಲ್ಲಿ ಚಿಕಿತ್ಸೆ

ಮಕ್ಕಳಿಗೆ ಬರೆ ಎಳೆದು ಚಿತ್ರಹಿಂಸೆ ಕೊಟ್ಟ ತಂದೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಸುಖಾಸುಮ್ಮನೆ ಹಠ ಮಾಡುತ್ತಾರೆಂದು ಎರಡನೇ ಪತ್ನಿಯ ಚಾಡಿ ಮಾತು ಕೇಳಿ ದೋಸೆ ಎತ್ತುವ ಅಲ್ಲೆಯಿಂದ ತನ್ನ ಮೂವರು ಮಕ್ಕಳಿಗೆ ಅಮಾನುಷವಾಗಿ ಬರೆ ಎಳೆದು ಚಿತ್ರಹಿಂಸೆ ಕೊಟ್ಟಿರುವ ಪ್ರಕರಣ ಜೆ.ಪಿ. ನಗರದಲ್ಲಿ ನಡೆದಿದೆ. ಸ್ಥಳೀಯರು ಕೊಟ್ಟ ಮಾಹಿತಿ ಮೇರೆಗೆ ಆರೋಪಿ ತಂದೆ ಹಾಗೂ ಮಲತಾಯಿಯನ್ನು ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ. ನಗರದ ರಾಗಿಗುಡ್ಡ ಕೆಎಸ್‌ಆರ್‌ಟಿಸಿ ಲೇಔಟ್‌ನ ನಿವಾಸಿ ತಮಿಳ್ ಸೆಲ್ವನ್ (45) ಮತ್ತು ಈತನ 2ನೇ ಪತ್ನಿ ಸತ್ಯ (35) ಬಂಧಿತರು. ತಮಿಳ್ ಸೆಲ್ವನ್ ಹಾಗೂ ಆತನ ಮೊದಲ ಪತ್ನಿ ಅಂಜಲಿಗೆ ಜನಿಸಿದ ಮಕ್ಕಳಾದ ಸೌಮ್ಯಾ (3), ರಾಘವನ್ (4) ಮತ್ತು ನಿತೀಶ್ (6) ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಸತ್ಯ

ತಮಿಳ್ ಸೆಲ್ವನ್

ಕ್ರೂಸರ್ ಚಾಲಕನಾಗಿರುವ ಸೆಲ್ವನ್, ಕೆಲ ವರ್ಷಗಳ ಹಿಂದೆ ಅಂಜಲಿ ಎಂಬಾಕೆಯನ್ನು ವಿವಾಹವಾಗಿದ್ದ. ದಂಪತಿಗೆ ಸೌಮ್ಯ, ರಾಘವನ್, ನಿತೀಶ್ ಎಂಬ ಮೂವರು ಮಕ್ಕಳಿದ್ದವು. 3 ತಿಂಗಳ ಹಿಂದೆಯಷ್ಟೆ ಅಂಜಲಿ ಮೃತಪಟ್ಟಿದ್ದರು. ಈ ನಡುವೆ ಸೆಲ್ವನ್, ಸತ್ಯ ಎಂಬಾಕೆಯನ್ನು ವಿವಾಹವಾಗಿದ್ದ. ಮೊದಲ ಪತ್ನಿಯ ಮೂವರು ಮಕ್ಕಳನ್ನು 2ನೇ ಪತ್ನಿ ಸತ್ಯ ಮನೆಗೆ ಕರೆದುಕೊಂಡು ಬಂದಿದ್ದ. ಸೆಲ್ವನ್ ಕೆಲಸಕ್ಕೆ ಹೋಗಿ ಮನೆಗೆ ಬರುತ್ತಿದ್ದಂತೆ ಸತ್ಯ ಮಕ್ಕಳ ಮೇಲೆ ಚಾಡಿ ಹೇಳುತ್ತಿದ್ದಳು. ಸೆಲ್ವನ್ ಮಕ್ಕಳ ಮೇಲೆ ಹಲ್ಲೆ ಮಾಡಿ ಚಿತ್ರಹಿಂಸೆ ಕೊಡುತ್ತಿದ್ದ.

ಸ್ವಂತ ಮಕ್ಕಳು ಎನ್ನದೆ ಭುಜ, ಮೊಣಕೈ ಮತ್ತು ಪಾದಗಳಿಗೆ ಚಾಕುವಿನಿಂದ ಹಲ್ಲೆ ನಡೆಸಿದ್ದ. ಜೂ.21ರ ರಾತ್ರಿ ದೋಸೆ ಎತ್ತುವ ಅಲ್ಲೆಯಿಂದ ಮೂವರು ಮಕ್ಕಳಿಗೆ ಬರೆ ಎಳೆದು ಕ್ರೌರ್ಯ ಮೆರೆದಿದ್ದ. ಮಕ್ಕಳು ಕಿರುಚುತ್ತ ಮನೆಯಿಂದ ಹೊರಗೆ ಓಡಿ ಬಂದಿದ್ದವು. ಅಕ್ಕಪಕ್ಕದ ಮನೆಯವರು ಬಂದು ನೋಡಿದಾಗ ನಿತೀಶ್ ಕಾಲಿನಲ್ಲಿ ರಕ್ತ ಸುರಿಯುತ್ತಿತ್ತು. ಆತನನ್ನು ಹಿಂಬಾಲಿಸಿ ಕೊಂಡು ಬಂದ ಸೆಲ್ವನ್ ಕೈನಲ್ಲಿ ಬ್ಲೇಡ್ ಕಂಡುಬಂದಿತ್ತು.

ಬರೆ ಎಳೆದಿದ್ದರಿಂದ ಮಕ್ಕಳ ಕೈ ಮತ್ತು ಕಾಲಿಗೆ ಗಾಯಗಳಾಗಿರುವುದು.

ನೆರೆಹೊರೆಯವರಿಂದ ಕೃತ್ಯ ಬಹಿರಂಗ

ಮನೆಯಿಂದ ಓಡಿ ಬಂದ ನಿತೀಶ್‌ನ ಪಾದ ಹಾಗೂ ಭುಜದ ಬಳಿ ಸುಟ್ಟ ಗಾಯಗಳಾಗಿದ್ದವು. ಮನೆಯ ಮಂಚದ ಕೆಳಗೆ ಬಚ್ಚಿಟ್ಟುಕೊಂಡಿದ್ದ ಮತ್ತಿಬ್ಬರು ಮಕ್ಕಳ ತಲೆ, ಹೊಟ್ಟೆ, ಕಾಲು ಹಾಗೂ ದೇಹದ ಇತರ ಭಾಗಗಳಲ್ಲಿ ಗಾಯಗಳಾಗಿತ್ತು. ಮನೆ ಬಳಿ ಜನ ಸೇರುತ್ತಿದ್ದಂತೆ ಸೆಲ್ವನ್ ಪರಾರಿಯಾಗಿದ್ದ. ನೆರೆ–ಹೊರೆಯವರು ಮಕ್ಕಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿದ್ದರು. ನಂತರ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿನಾಕಾರಣ ಹೊಡೆಯುತ್ತಿದ್ದರು...

ಭಿಕ್ಷೆ ಎತ್ತಲು ಕಳುಹಿಸುತ್ತೇನೆ ಎಂದು ಹೇಳಿ ವಿನಾಕಾರಣ ಮಲತಾಯಿ ಹೊಡೆಯುತ್ತಿದ್ದಳು. ಅಮ್ಮನ ಮಾತು ಕೇಳಿ ಅಪ್ಪನೂ ಹೊಡೆಯುತ್ತಿದ್ದ. ನಮಗೆ ಮಲಗಲು ಜಾಗವನ್ನೂ ಕೊಡುತ್ತಿರಲಿಲ್ಲ. ಮಂಚದ ಕೆಳಗಿನ ಬಾಕ್ಸ್‌ನಲ್ಲಿ ಮಲಗುತ್ತಿದ್ದೆವು ಎಂದು ಮಕ್ಕಳು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮನೆಯಲ್ಲಿ ಊಟ ಇದ್ದರೂ ಬೇರೆ ಮನೆಗೆ ಹೋಗಿ ಊಟ ಕೇಳುತ್ತಿದ್ದರು. ಹೆಚ್ಚು ಹೊರಗಡೆ ಓಡಾಡುತ್ತಿದ್ದ ಕಾರಣ ಬುದ್ಧಿ ಕಲಿಯಲಿ ಎಂದು ಹೀಗೆ ಮಾಡುತ್ತಿದ್ದೆವು ಎಂದು ಸತ್ಯ ಪೊಲೀಸರ ಮುಂದೆ ಹೇಳಿದ್ದಾಳೆ ಎಂದು ತಿಳಿದುಬಂದಿದೆ.

ಡಾರ್ಕ್ ನೆಟ್‌ನಲ್ಲಿ ಡ್ರಗ್ಸ್ ದಂಧೆ

ಬೆಂಗಳೂರು: ಡಾರ್ಕ್ ನೆಟ್‌ನಲ್ಲಿ ವಿದೇಶದಿಂದ ಡ್ರಗ್ಸ್ ತರಿಸಿಕೊಂಡು ಡ್ಯುಂಜೋದಲ್ಲಿ ವ್ಯಸನಿಗಳಿಗೆ ಪೂರೈಕೆ ಮಾಡುತ್ತಿದ್ದ ಕಾನೂನು ವಿದ್ಯಾರ್ಥಿ ಸೇರಿ ಐವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಮಾಗಡಿ ರಸ್ತೆಯ ಬ್ಯಾಡರಹಳ್ಳಿ ಸಮೀಪದ ಭಾರತನಗರದ ಈಸ್ಟ್ ವೆಸ್ಟ್ ಕಾಲೇಜು ಹತ್ತಿರದ ಪೇಯಿಂಗ್ ಗೆಸ್ಟ್ ಮೇಲೆ ಸಿಸಿಬಿ ಸಿಬ್ಬಂದಿ ದಾಳಿ ನಡೆಸಿ ಅನಿರುದ್ಧ, ಜಿಕೋಬಾ, ಜಾಸ್ಟಿನ್, ಆದಿತ್ಯ ಮತ್ತು ಸಂದೀಪ್ ಎಂಬುವರನ್ನು ಬಂಧಿಸಿದ್ದಾರೆ.

» ಕಾನೂನು ವಿದ್ಯಾರ್ಥಿ ಸೇರಿ ಐವರ ಸೆರೆ

» 30 ಲಕ್ಷ ರೂ. ಮೌಲ್ಯದ ಮಾದಕ ದ್ರವ್ಯ ವಶಕ್ಕೆ

300 ಎಂಡಿಎಂಎ ಎಕ್ಸ್‌ಟಿಸಿ ಮಾತ್ರೆಗಳು, 150 ಎಲ್‌ಎಸ್‌ಡಿ ಸ್ಟ್ರಿಪ್‌ಗಳು, 250 ಗ್ರಾಂ ಹ್ಯಾಶಿಶ್ ಹಾಗೂ 1 ಕೆ.ಜಿ. ಗಾಂಜಾ ಸೇರಿ 30 ಲಕ್ಷ ರೂ. ಮೌಲ್ಯದ ಡ್ರಗ್ಸ್, ಮೊಬೈಲ್‌ಗಳು ಮತ್ತು ಕಾರುಗಳನ್ನು ಜಪ್ತಿ ಮಾಡಲಾಗಿದೆ. ತಲೆಮರೆಸಿ ಕೊಂಡಿರುವ ಮೂವರು ಆರೋಪಿಗಳ ಪತ್ತೆಗೆ ಬಲೆಬೀಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಿಮಾಚಲ ಪ್ರದೇಶದಲ್ಲಿ ಕುಳಿತು ಮೂವರು ಪೆಡ್ಲರ್‌ಗಳು, ಡಾರ್ಕ್ ನೆಟ್‌ನಲ್ಲಿ ಅಂತಾರಾಷ್ಟ್ರೀಯ ಡ್ರಗ್ಸ್ ಜಾಲವನ್ನು ಸಂಪರ್ಕಿಸಿ ಬಿಟ್ ಕಾಯಿನ್ ಬಳಸಿ ಡ್ರಗ್ಸ್ ಖರೀದಿಸುತ್ತಿದ್ದರು. ವಿದೇಶದಿಂದ ಕೊರಿಯರ್ ಮೂಲಕ ಬೆಂಗಳೂರಿನಲ್ಲಿ ನೆಲೆಸಿದ್ದ ತಂಡದ ಸದಸ್ಯರಿಗೆ ಎಂಡಿಎಂಎ, ಎಲ್‌ಎಸ್‌ಡಿ ಸೇರಿ ಇತರೆ ಡ್ರಗ್ಸ್ ತರಿಸುತ್ತಿದ್ದರು. ಅಮೆಜಾನ್ ಕವರ್‌ನಲ್ಲಿ ಡ್ರಗ್ಸ್ ಪ್ಯಾಕ್ ಮಾಡಿ ಡ್ಯುಂಜೋ ಮುಖಾಂತರ ನಗರದ ಗಿರಾಕಿಗಳಿಗೆ ಪೂರೈಸುತ್ತಿದ್ದರು. ಆನ್‌ಲೈನ್ ಮೂಲಕವೇ ಗ್ರಾಹಕರು ಹಾಗೂ ಪೆಡ್ಲರ್‌ಗಳ ನಡುವೆ ಹಣಕಾಸು ವ್ಯವಹಾರ ನಡೆಯುತ್ತಿತ್ತು.

ಬಂಧಿತರ ಪೈಕಿ ಇಬ್ಬರು ಐಟಿ ಉದ್ಯೋಗಿಗಳು, ಒಬ್ಬ ಎಲ್‌ಎಲ್‌ಬಿ ವಿದ್ಯಾರ್ಥಿ ಸೇರಿದ್ದಾನೆ. ಟೆಕ್ಕಿಗಳು ಸಹೋದ್ಯೋಗಿಗಳನ್ನೇ ತಮ್ಮ ಗಿರಾಕಿ ಗಳನ್ನಾಗಿಸಿಕೊಂಡಿದ್ದರು. ವಿದೇಶದಿಂದ ಬರುವ ಕೊರಿಯರ್ ಮೇಲೆ ನಿಗಾವಹಿಸಿದಾಗ ಜಾಲ ಪತ್ತೆಯಾಗಿದೆ. ಮೊದಲು ಡ್ರಗ್ಸ್ ವ್ಯಸನಿಗಳಾಗಿದ್ದ ಆರೋಪಿಗಳು, ಆನಂತರ ಪೆಡ್ಲರ್‌ಗಳಾಗಿ ಬದಲಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾರು ಚಾಲಕ ಅರೆಸ್ಟ್

ಗಾಂಜಾ ಮಾರಾಟಕ್ಕೆ ಯತ್ನಿಸಿದ್ದ ಕಾರು ಚಾಲಕನನ್ನು ಗಂಗಮ್ಮನಗುಡಿ ಪೊಲೀಸರು ಬಂಧಿಸಿದ್ದಾರೆ. ಕೋಗಿಲು ಕ್ರಾಸ್‌ನ ಎಂ.ಎಸ್. ನಗರದ ಅಮೀನ್ ಖಾನ್ ಬಂಧಿತ. 8 ಕೆ.ಜಿ. ಗಾಂಜಾ ಜಪ್ತಿ ಮಾಡಲಾಗಿದೆ. 10ನೇ ತರಗತಿಗೆ ಓದು ಮೊಟಕುಗೊಳಿಸಿದ್ದ ಖಾನ್, ಕಾರು ಚಾಲಕನಾಗಿದ್ದ. 2 ವರ್ಷಗಳ ಹಿಂದೆ ಕಾರು ಅಪಘಾತಕ್ಕೆ ಒಳಗಾದ ಕಾರಣ ಸಂಕಷ್ಟಕ್ಕೆ ಸಿಲುಕಿದ್ದ. ಹಣದಾಸೆ ತೋರಿಸಿ ಖಾನ್‌ನನ್ನು ಸ್ನೇಹಿತ ಮಾದಕ ವಸ್ತು ಜಾಲಕ್ಕೆ ಸೆಳೆದಿದ್ದ. ಆಂಧ್ರ ಪ್ರದೇಶದಿಂದ ಗಾಂಜಾ ತಂದು ಮಾರಾಟ ಮಾಡುತ್ತಿದ್ದರು. ಗಂಗಮ್ಮ ಸರ್ಕಲ್‌ನಲ್ಲಿ ಗಾಂಜಾ ಮಾರಾಟಕ್ಕೆ ಯತ್ನಿಸುತ್ತಿದ್ದಾಗ ಅಮೀನ್ ಖಾನ್‌ನನ್ನು ಬಂಧಿಸಲಾಗಿದೆ. ಮತ್ತೊಬ್ಬ ತಲೆಮರೆಸಿಕೊಂಡಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಪುತ್ರನ ಕೊಂದು ತಂದೆ ನೇಣಿಗೆ ಶರಣು

ಬಂಟ್ವಾಳ: ತಾಲೂಕಿನ ಪಿಲಾತಬೆಟ್ಟು ಗ್ರಾಮದ ಶ್ರೀರಾಮ ನಗರ ದೈಕಿನಕಟ್ಟೆ ಎಂಬಲ್ಲಿ ಬುಧವಾರ ಮಧ್ಯಾಹ್ನ ಮಗನನ್ನು ಕತ್ತಿಯಿಂದ ಕಡಿದು ಕೊಲೆ ಮಾಡಿದ ತಂದೆ, ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪುಂಜಾಲಕಟ್ಟೆ ಕರ್ನಾಟಕ ಪಬ್ಲಿಕ್ ಸ್ಕೂಲ್‌ನ 8ನೇ ತರಗತಿ ವಿದ್ಯಾರ್ಥಿ ಸಾತ್ವಿಕ್‌ನನ್ನು (15) ತಂದೆ ಬಾಬು ನಾಯ್ಕ (40) ಕೊಲೆ ಮಾಡಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಕುಡಿತದ ಚಟ ಹೊಂದಿದ್ದ ಬಾಬು, ಹಲವು ದಿನಗಳಿಂದ ಮಗನೊಂದಿಗೆ ಕ್ಷುಲ್ಲಕ ಕಾರಣಕ್ಕೆ ಗಲಾಟೆ ಮಾಡುತ್ತಿದ್ದ. ಬುಧವಾರ ಬಾಬು ಪತ್ನಿ ಸುಗಂಧಿ ತವರು ಮನೆಗೆ ಹೋಗಿದ್ದಾಗ ಮಧ್ಯಾಹ್ನ ಮಗನೊಂದಿಗೆ ಗಲಾಟೆ ಮಾಡಿ ಕತ್ತಿಯಿಂದ ಕುತ್ತಿಗೆಗೆ ಕಡಿದು, ಚೂರಿಯಿಂದ ಇರಿದು ಹತ್ಯೆಗೈದಿದ್ದಾನೆ. ಬಳಿಕ ಮನೆಯ ಕೋಣೆಯೊಂದರಲ್ಲಿ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪುಂಜಾಲಕಟ್ಟೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ನಡೆಸುತ್ತಿದ್ದಾರೆ.

» ಕ್ಷುಲ್ಲಕ ಕಾರಣಕ್ಕೆ ಗಲಾಟೆ ಬಳಿಕ ಕೃತ್ಯ

ನಿವೃತ್ತ ಪೇದೆ ಪುತ್ರ ಆತ್ಮಹತ್ಯೆ

ಬೆಂಗಳೂರು: ಲಾಕ್‌ಡೌನ್‌ನಿಂದ ಉದ್ಯೋಗ ವಿಲ್ಲದೆ ನೊಂದ ನಿವೃತ್ತ ಹೆಡ್ ಕಾನ್ಸ್‌ಟೆಬಲ್ ಪುತ್ರ ನೇಣಿಗೆ ಶರಣಾಗಿದ್ದಾನೆ. ಬಾಗಲಗುಂಟೆಯ ನಿವಾಸಿ ಮಂಜುನಾಥ್ (36) ಆತ್ಮಹತ್ಯೆ ಮಾಡಿಕೊಂಡವರು. ಮಂಜುನಾಥ್ 5 ತಿಂಗಳ ಹಿಂದೆಯಷ್ಟೆ ಪತ್ನಿಯಿಂದ ವಿಚ್ಛೇದನ ಪಡೆದಿದ್ದರು. ವೃತ್ತಿಯಲ್ಲಿ ಮೆಟಡೋರ್ ಚಾಲಕನಾಗಿದ್ದನು. ಲಾಕ್‌ಡೌನ್‌ನಿಂದ ಕೆಲಸವಿಲ್ಲದೆ ನೊಂದಿದ್ದನು ಬುಧವಾರ ಬೆಳಗ್ಗೆ ರೂಂ ಬಾಗಿಲು ತೆಗೆಯದಿದ್ದಾಗ ಕಿಟಕಿ ಮುಖಾಂತರ ಕುಟುಂಬಸ್ಥರು ನೋಡಿದಾಗ ಕೃತ್ಯ ಬೆಳಕಿಗೆ ಬಂದಿದೆ. ಬಾಗಲಗುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏರಿಯಾ ಹಿಡಿತಕ್ಕಾಗಿ ಸ್ನೇಹಿತನ ಕೊಲೆ

ಬೆಂಗಳೂರು: ಏರಿಯಾದಲ್ಲಿ ಹಿಡಿತ ಸಾಧಿಸುವ ವಿಚಾರವಾಗಿ ಕುಡಿದ ಅಮಲಿನಲ್ಲಿ ಸ್ನೇಹಿತರ ನಡುವೆ ನಡೆದ ಜಗಳ ಓರ್ವನ ಕೊಲೆಯಲ್ಲಿ ಅಂತ್ಯವಾಗಿದೆ. ಪುಲಿಕೇಶಿ ನಗರದ ಐಟಿಸಿ ಕಾಲನಿ ನಿವಾಸಿ ಥಾಮಸ್ ಅಲಿಯಾಸ್ ಗುಂಡ (23) ಕೊಲೆಯಾದವ. ದಿನೇಶ್, ರಂಜಿತ್ ಬಂಧಿತರು. ಸುಹೈಲ್ ಸೇರಿ ನಾಲ್ವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಥಾಮಸ್ ಸ್ಥಳೀಯ ಯುವಕರ ಗುಂಪು ಕಟ್ಟಿಕೊಂಡು ಏರಿಯಾದಲ್ಲಿ ಹಿಡಿತ ಸಾಧಿಸಲು ಗಲಾಟೆ ಮಾಡುತ್ತಿದ್ದ. ದಿನೇಶ್, ರಂಜಿತ್ ತಂಡ ಕೂಡ ಇದೇ ಏರಿಯಾದಲ್ಲಿ ಹಿಡಿತ ಸಾಧಿಸಲು ಮುಂದಾಗಿತ್ತು.

ಮಂಗಳವಾರ ಥಾಮಸ್‌ಗೆ ಕರೆ ಮಾಡಿ ಸ್ನೇಹಿತನ ಹುಟ್ಟುಹಬ್ಬದ ಆಚರಣೆಗಾಗಿ ಜೀವನಹಳ್ಳಿಯ ಸ್ಮಶಾನದ ಬಳಿ ಕರೆಸಿಕೊಂಡಿದ್ದರು. ಸ್ಥಳೀಯ ಯುವತಿ ವಿಚಾರವಾಗಿ ದಿನೇಶ್, ರಂಜಿತ್ ಗಲಾಟೆ ಆರಂಭಿಸಿದ್ದರು. ಇದನ್ನು ಗಮನಿಸಿದ ಸ್ಥಳೀಯರು ಎಲ್ಲರನ್ನೂ ಮನೆಗೆ ಕಳುಹಿಸಿದ್ದರು. ರಾತ್ರಿ 10.30ರಲ್ಲಿ ಪುಲಿಕೇಶಿನಗರದಲ್ಲಿರುವ ರಾಕೇಶ್, ಥಾಮಸ್ ಮನೆಗೆ ಬಂದ ಆರೋಪಿಗಳು ಇಬ್ಬರ ಮೇಲೂ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರು. ಗಂಭೀರವಾಗಿ ಗಾಯಗೊಂಡ ಥಾಮಸ್ ಮೃತಪಟ್ಟಿದ್ದಾನೆ.

Form No.22 and 18
General Notice in respect of interlocutory Application and Notice for appearance in Appeals order 41 Rule 14 CPC, and Rules 1,2,4 and 11 of chapter IV Karnataka High court Rules
IN THE HIGH COURT OF KARNATAKA AT BENGALURU
MFA No.5431/2015 (MV-SJ)

Appellant: Sri. Balaram Mourya,
S/o Shesharam Mourya, Aged about 39 years, R/at No.4546, 6th Cross, Dasarahalli, Bharathi Layout, Mariyannapalya, Bangalore-560 024.
By Sri Shripad V Shastri, Advocate
Vs
Respondents: K. Amar Raju,
S/o K. Narayanaraju, R/at No.749, BEL Quarters, BEL Colony, Near Nagaland Circle, Jalahalli Post, Bangalore-14 and Another.
Appeal from the Judgement / Award/ Order passed on 18.12.2014 in M.V.C Number 5200/2011 on the file of the XXII Additional Small Causes Judge and Member MACT, Bengaluru. IA No.1/2015 for condone the delay of 100 days filed in the above Appeal.
To: Respondent No.1: K. Amar Raju,
S/o K. Narayanaraju, R/at No.749, BEL Quarters, BEL Colony, Near Nagaland Circle, Jalahalli Post, Bangalore-14.
Whereas the aforementioned Appeal preferred has been registered by this court.
Notice is hereby given to you appear in this Court in person or through an Advocate duly instructed or through some one authorized by law to act for you in this case **on 26.07.2021 at 10.30 a.m.**, in case you intend to contest the appeal. If you fail so to appear, the appeal will be dealt with, heard and decided in your absence.
Given under my hand and the seal of this court on 9th day of June 2021.
By Order of the Court
(Venkateshaiah) **Asst. Registrar.**

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನನ್ನ ಕಕ್ಷಿದಾರರಾದ ಶಶಿಧರ ಎಂ.ಎನ್. ಬಿನ್ ನಂದೀಶ್ವರಪ್ಪ ಬಿ.ಪಿ., ವಾಸ : # 307, 3ನೇ ಮಹಡಿ, ಚರಣ್ ಹ್ಯಾಬಿಟಟ್ ಅಪಾರ್ಟ್‌ಮೆಂಟ್, ಆರ್.ಟಿ. ನಗರ, ಬೆಂಗಳೂರು–560032, ರವರು ಡಾ|| ಎಸ್.ಎಂ. ಪ್ರಸಾದ್ ಬಿನ್ ಪಿ.ಎಂ. ರೆಡ್ಡಿ ವಾಸ : # 1632, ಜುಡಿಷಿಯಲ್ ಲೇಔಟ್, ಯಲಹಂಕ, ಬೆಂಗಳೂರು–560065 ರವರಿಂದ ಷೆಡ್ಯೂಲ್ ಸ್ವತ್ತನ್ನು ಖರೀದಿಸಲು ಇಚ್ಛಿಸಿದ್ದು, ಸದರಿ ಸ್ವತ್ತನ್ನು ಶ್ರೀಯುತರು ಮಲ್ಲೇಶ್ವರಂ ಉಪ ನೋಂದಣಿ ಕಛೇರಿಯಲ್ಲಿ ನೊಂದಾಯಿಸಲ್ಪಟ್ಟ, ಖರೀದಿ ಪತ್ರ ಸಂಖ್ಯೆ ಎಂಎಲ್‌ಎಸ್–1–03529/2013–14 ಪುಸ್ತಕ–1, ಸಿ.ಡಿ. ನಂ. ಎಂಎಲ್‌ಎಸ್‌ಡಿ73ರ ಮೂಲಕ ದಿನಾಂಕ : 19–03–2014 ರಂದು ಸಂಪೂರ್ಣ ಮಾಲೀಕತ್ವವನ್ನು ಹೊಂದಿರುತ್ತಾರೆ.
ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳು, ಕಂಪನಿ ಹಣಕಾಸು / ಸಂಘ ಸಂಸ್ಥೆಗಳು ಇನ್ನಿತರರು, ಯಾವುದೇ ಮೂಲಕ ಹಕ್ಕು ಹಾಗೂ ಹಿತಾಸಕ್ತಿಯನ್ನು ಹೊಂದಿದ್ದಲ್ಲಿ ಈ ಪ್ರಕಟಣೆಯಾದ 07 ದಿನಗಳೊಳಗಾಗಿ ಸದರಿ ಆಸ್ತಿಯ ಸೂಕ್ತ ದಾಖಲಾತಿಯೊಂದಿಗೆ ತಮ್ಮ ಅಹವಾಲನ್ನು ಪ್ರತಿಪಾದಿಸಲು ತಿಳಿಸಲಾಗಿದೆ. ಇಲ್ಲದಿದ್ದಲ್ಲಿ ಈ ಸ್ವತ್ತು ಎಲ್ಲಾದರಿಂದಲೂ ಋಣ ಮುಕ್ತ ಆಸ್ತಿಯೆಂದು ಭಾವಿಸಲಾಗುವುದು.

ಷೆಡ್ಯೂಲ್ ಸ್ವತ್ತು
ಬೆಂಗಳೂರು, ಯಲಹಂಕ ನ್ಯೂ ಟೌನ್ ಎಕ್ಸ್‌ಟೆನ್ಷನ್, ಎಂಐಜಿ 3ನೇ ಹಂತದಲ್ಲಿರುವ ನಿವೇಶನ ಸಂಖ್ಯೆ 778, ಬಿಬಿಎಂಪಿ. ಖಾತಾ ನಂ. 979/1858/778, ಬಿಬಿಎಂಪಿ ವಾರ್ಡ್ ನಂ. 4, ವಿಸ್ತೀರ್ಣ : ಪೂರ್ವ–ಪಶ್ಚಿಮಕ್ಕೆ : 12.20 ಮೀಟರ್ ಮತ್ತು ಉತ್ತರ–ದಕ್ಷಿಣಕ್ಕೆ : 18.30 ಮೀಟರ್, ಒಟ್ಟು 223.26 ಚದರ ಮೀಟರ್, ಜೊತೆಗೆ ವಸತಿ ನಿರ್ಮಿತ ಕಟ್ಟಡದ ಎಲ್ಲಾ ಹಕ್ಕುಗಳು ಮೇಲ್ಛಾವಣಿಯೊಂದಿಗೆ ಮೇಲ್ಕೈ ಕೆಳಗೆ ಅಥವಾ ಮೇಲಿರುವ ಮತ್ತು ಅದರ ಮೇಲೆ ಸುತ್ತುವರೆದಿದೆ. ಇದರ ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ಸಂಖ್ಯೆ 779, ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 777, ಉತ್ತರಕ್ಕೆ : ಮನೆಯನ್ನು ಹೊಂದಿರುವ ಸಂಖ್ಯೆ 775, ದಕ್ಷಿಣಕ್ಕೆ : ರಸ್ತೆ,

ಶೇಷಪ್ಪಗೌಡ ಪಾಟೀಲ್, ವಕೀಲರು,
ಆರ್.ಆರ್. ನಗರ, ಬೆಂಗಳೂರು–560098,
ದೂ : 9480117041

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರಾದ ಬೆಂಗಳೂರು–560017, ವಿಮಾನಪುರ, ಮುರುಗೇಶಪಾಳ್ಯ, 4ನೇ ಅಡ್ಡರಸ್ತೆ, 1ನೇ ಮಹಡಿ, ಮನೆ ನಂ. 2514 ರಲ್ಲಿ ವಾಸವಾಗಿರುವ ಹಾಗೂ ಬೆಂಗಳೂರು–560008, ಕೋಡಿಹಳ್ಳಿ, ಲೀಲಾ ಪ್ಯಾಲೇಸ್ ಹಿಂಭಾಗ, ಉಡುಪಿ ಪಾರ್ಕ್ ಹೋಟೆಲ್ ನಡೆಸುವ ಶಂಕರ್ ಶೆಟ್ಟಿರವರ ಮಗನಾದ ದಿನಕರ್ ಶೆಟ್ಟಿರವರು ಈ ಕೆಳಕಂಡ ಮೂಲ ದಾಖಲಾತಿಗಳನ್ನು ದಿನಾಂಕ: 08–06–2021ರಂದು ಲೀಲಾ ಪ್ಯಾಲೇಸ್ ಕಡೆಯಿಂದ ಮುರುಗೇಶ್ ಪಾಳ್ಯದ ಕಡೆ ಬೈಕ್‌ನಲ್ಲಿ ಸಂಚರಿಸುತ್ತಿರುವಾಗ ಕೆಲವು ದಾಖಲಾತಿಗಳು ಬಿದ್ದು ಹೋಗಿದ್ದು ಹಾಗೂ ದಿ: 16–06–2021ರಂದು ಆಟೋದಲ್ಲಿ ಲೀಲಾ ಪ್ಯಾಲೇಸ್, ಬೆಂಗಳೂರು ಕಡೆಯಿಂದ ಮುರುಗೇಶ್ ಪಾಳ್ಯ ಸಿಗ್ನಲ್‌ನಲ್ಲಿ ಸಂಚರಿಸುತ್ತಿರುವಾಗ ಕೆಲವು ಮೂಲ ದಾಖಲಾತಿಗಳನ್ನು ಕಳೆದುಕೊಂಡಿದ್ದು ತದ ನಂತರ ಹುಡುಕಲಾಗಿ ಯಾವುದೇ ದಾಖಲಾತಿಗಳನ್ನು ಸಿಗದಿದ್ದಕ್ಕೆ ದಿ: 08–06–2021ರಂದು ಕ್ರೈಂ ಬ್ರಾಂಚ್, ಬೆಂಗಳೂರು ಸಿಟಿ, ಪೊಲೀಸ್ ಕಮೀಷನರ್‌ನಲ್ಲಿ ದೂರು ಸಲ್ಲಿಸಿದ್ದು ದೂರಿನ ಸಂಖ್ಯೆ 104835/2021 ಮತ್ತು ದಿನಾಂಕ: 16–06–2021 ದೂರು ಸಲ್ಲಿಸಿದ್ದು ದೂರಿನ ಸಂಖ್ಯೆ 106569/2021 ಆಗಿರುತ್ತದೆ.
ಸದರಿ ಈ ಕೆಳಕಂಡ ಕಳೆದು ಹೋಗಿರುವ ಮೂಲ ದಾಖಲಾತಿಗಳು ಯಾರಿಗಾದರೂ ದೊರಕಿದ್ದಲ್ಲಿ ಈ ಕೆಳಕಂಡ ವಿಳಾಸಕ್ಕಾಗಲಿ ಅಥವಾ ಮೇಲ್ಕಂಡ ನನ್ನ ಕಕ್ಷಿದಾರರ ವಿಳಾಸಕ್ಕೆ ತಿಳಿಸುವುದಾಗಿ ತಮ್ಮಲ್ಲಿ ವಿನಂತಿ.
ಕಳೆದು ಹೋಗಿರುವ ಮೂಲ ದಾಖಲಾತಿಗಳ ವಿವರ:–
1. ದಿನಕರ್ ಹೆಸರಿನ ರೇಷನ್ ಕಾರ್ಡ್,
2. ರೂ. 2000/– ನಗದು,
3. ಸಹಿ ಮಾಡಿರುವ on Demand ಪೇಪರ್ಸ್,
4. ಸಹಿ ಮಾಡಿರುವ C1-2 ಟ್ರಾನ್ಸ್‌ಫರ್ ಪೇಪರ್ಸ್,
5. ಸಹಿ ಮಾಡಿರುವ ಚೆಕ್ ಲೀಫ್‌ಗಳು (ವಿಜಯ ಬ್ಯಾಂಕ್) ಮತ್ತು ಇತರ ದಾಖಲಾತಿಗಳಿಗೆ ಕೆ.ಜಿ. ನರಸಿಂಹಮೂರ್ತಿ ಬಿನ್ ಕೆ.ಎನ್. ಗುರುಸ್ವಾಮಿ ರವರ ಸಹಿ ಆಗಿರುತ್ತದೆ.

ಜಿ.ವಿ. ಅಶ್ವಥನಾರಾಯಣ, ವಕೀಲರು
ನಂ. 192, 6ನೇ ಮುಖ್ಯರಸ್ತೆ, ಮಹಾಗಣಪತಿನಗರ,
ವೆಸ್ಟ್ ಆಫ್ ಕಾರ್ಡ್ ರೋಡ್, ರಾಜಾಜಿನಗರ,
ಬೆಂಗಳೂರು–560010. ಮೊಬೈಲ್ 98453 02561
ದಿನಾಂಕ: 23–06–2021

PUBLIC NOTICE

Public are hereby notified that my client intends to purchase the SCHEDULE PROPERTY from its owner **Mr.M.S.KRISHNA PRASAD, Son of Mr.M.Srinivasa Shetty.**
Persons/banks/society/firm or any other body having any right, title, interest, claim or charge over the schedule mentioned property or any part thereof is hereby notified to lodge their objections/claims if any, in writing with documentary evidence regarding their manner of right, title, interest, claim or charge, within **15 days** from the date of this publication to the office of undersigned, after which period my client shall proceed to purchase the schedule mentioned property on the basis that there are no objections/claims of whatsoever nature with regard to the schedule mentioned property.

SCHEDULE PROPERTY
All that piece and parcel property bearing Vacant BDA **Site No.4 BC-414**, BBMP Katha bearing No.4BC-414 (PID No.84-149-4BC-414), measuring East to West 12.20 Mtrs, North to South 18.30 Mtrs, in all measuring 223.26 Sq. Mtrs, situated at **Old Madras Banaswadi Road Layout (OMBR Layout), Bangalore,** with all rights, appurtenances, whatsoever whether underneath or above the surface, and bounded on the :
East by : Site No.4BC-416;
West by : Site No.4BC-412;
North by : 4B Cross Road;
South by: Site No.4AC-413

LEGAL & LEGAL,
ADVOCATES, No.103, 2nd Floor, Ramya Nest Apts., 4th Cross, OMBR Layout, Banaswadi, Bengaluru-560 043
Mob: 9900111844, 7406234888.

ಕುತ್ತಿಗೆಗೆ ಗಾಳಿಪಟದ ದಾರ ಸುತ್ತಿಕೊಂಡು ಗಂಭೀರ ಗಾಯ

ಬೆಂಗಳೂರು: ಬೈಕ್‌ನಲ್ಲಿ ಹೋಗುತ್ತಿದ್ದ ಸವಾರನ ಕುತ್ತಿಗೆಗೆ ಗಾಳಿಪಟದ ದಾರ ಸುತ್ತಿಕೊಂಡು ಗಂಭೀರವಾಗಿ ಗಾಯಗೊಂಡಿರುವುದು ಆಡುಗೋಡಿಯಲ್ಲಿ ನಡೆದಿದೆ. ಜೀವ ಉಳಿಸಿಕೊಳ್ಳಲು, ಕೈಯಿಂದ ದಾರ ಎಳೆದಾಗ ಸವಾರನ ಎರಡು ಕೈ ಬೆರಳುಗಳಿಗೆ ತೀವ್ರವಾಗಿ ಪೆಟ್ಟಾಗಿದೆ.

ಸವಾರನ ಕುತ್ತಿಗೆಗೆ ಆಗಿರುವ ಗಾಯ.

ಆಡುಗೋಡಿ ಸಮೀಪದ ಪಂಜಾಬ್ ನ್ಯಾಷನಲ್ ಬ್ಯಾಂಕ್ ಕಡೆಗೆ ದ್ವಿಚಕ್ರ ವಾಹನದಲ್ಲಿ ಬುಧವಾರ ಹೋಗುತ್ತಿದ್ದ ಸವಾರನ ಕುತ್ತಿಗೆಗೆ ಗಾಳಿಪಟದ ದಾರ ಸುತ್ತಿಕೊಂಡಿದೆ. ಕತ್ತಿನ ಭಾಗಕ್ಕೆ ಗಾಯವಾಗಿ ರಕ್ತಸ್ರಾವ ಉಂಟಾಗಿದೆ.

ಇದರಿಂದ ಪಾರಾಗಲು ಯತ್ನಿಸಿದ ವ್ಯಕ್ತಿ, ಎಡ ಕೈಯಿಂದ ದಾರವನ್ನು ಎಳೆದಿದ್ದಾರೆ. ಆ ವೇಳೆ ಅವರ ಕೈಗೂ ಗಾಯವಾಗಿದ್ದು, ಎರಡು ಬೆರಳು ತುಂಡಾಗುವಂತಾಗಿದೆ. ನಂತರ ಸ್ಥಳೀಯರ ಸಹಾಯದಿಂದ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯುತ್ತಿದ್ದು, ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಚಿಕಿತ್ಸೆ ಪಡೆಯುತ್ತಿರುವ ನಡುವೆ ವಿಡಿಯೋ ಮಾಡಿ ನಡೆದ ಸಂಗತಿಯನ್ನು ವಿವರಿಸಿ ಸಾರ್ವಜನಿಕರು ಮುನ್ನೆಚ್ಚರಿಕೆ ವಹಿಸುವಂತೆ ಕೋರಿಕೊಂಡಿದ್ದಾರೆ. ಇದೀಗ ಈ ವಿಡಿಯೋ ಎಲ್ಲೆಡೆ ವೈರಲ್ ಆಗಿದ್ದು, ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

ಆಸ್ಟರ್ ಡಿಎಂ ಹೆಲ್ತ್ ಕೇರ್ ಲಿಮಿಟೆಡ್
CIN : L85110KA2008PLC147259
ನೊಂದಾಯಿತ ಕಚೇರಿ : ನಂ. 1785, ಸರ್ಜಾಪುರ್ ರಸ್ತೆ, ಸೆಕ್ಟರ್ 1, ಹೆಚ್‌ಎಸ್‌ಆರ್ ಲೇಔಟ್ ವಾರ್ಡ್ ನಂ,.174, ಅಗರ ಎಕ್ಸ್‌ಟೆನ್ಷನ್, ಬೆಂಗಳೂರು - 560102, ಕರ್ನಾಟಕ, ಭಾರತ
ದೂರವಾಣಿ : +91 484 6699999, ಇ-ಮೇಲ್ : cs@asterdmhealthcare.com, ವೆಬ್ ಸೈಟ್ : www.asterdmhealthcare.com

2021 ರ 31 ನೇ ಮಾರ್ಚ್ ಕೊನೆಯ ವರ್ಷದ ಹಾಗೂ ತ್ರೈಮಾಸಿಕ ಹಣಕಾಸಿನ ಲೆಕ್ಕ ಪರಿಶೋಧಿತ ಫಲಿತಾಂಶಗಳ ವರದಿ
(ಪ್ರತಿ ಷೇರ್ ದತ್ತಾಂಶ ಹೊರತುಪಡಿಸಿದ ಮೊತ್ತವು ಐಎನ್‌ಆರ್ ಕೋಟಿ ರೂಗಳಲ್ಲಿ)

	ಕ್ರೋಢೀಕರಿಸಿದ					ಸ್ವತಂತ್ರ				
	ತ್ರೈಮಾಸಿಕದ ಕೊನೆಯಲ್ಲಿ			ವರ್ಷದ ಕೊನೆಯಲ್ಲಿ		ತ್ರೈಮಾಸಿಕದ ಕೊನೆಯಲ್ಲಿ			ವರ್ಷದ ಕೊನೆಯಲ್ಲಿ	
ವಿವರಗಳು	31ನೇ ಮಾರ್ಚ್-21	31ನೇ ಡಿಸೆಂಬರ್ -20	31ನೇ ಮಾರ್ಚ್-20	31ನೇ ಮಾರ್ಚ್-21	31ನೇ ಮಾರ್ಚ್-20	31ನೇ ಮಾರ್ಚ್-21	31ನೇ ಡಿಸೆಂಬರ್ -20	31ನೇ ಮಾರ್ಚ್-20	31ನೇ ಮಾರ್ಚ್-21	31ನೇ ಮಾರ್ಚ್-20
	(ಆಡಿಟೆಡ್)	(ಅನ್ ಆಡಿಟೆಡ್)	(ಆಡಿಟೆಡ್)	(ಆಡಿಟೆಡ್)	(ಆಡಿಟೆಡ್)	(ಆಡಿಟೆಡ್)	(ಅನ್ ಆಡಿಟೆಡ್)	(ಆಡಿಟೆಡ್)	(ಆಡಿಟೆಡ್)	(ಆಡಿಟೆಡ್)
ಒಟ್ಟು ಆದಾಯ	2,420.69	2,233.31	2,306.92	8,658.40	8,689.75	240.82	221.72	209.73	768.17	874.93
ನಿವ್ವಳ ಲಾಭ/(ನಷ್ಟ) ತೆರಿಗೆ ಮುನ್ನ	121.97	115.23	146.26	205.05	330.04	(13.50)	(7.52)	0.33	(68.04)	64.61
ನಿವ್ವಳ ಲಾಭ/(ನಷ್ಟ) ತೆರಿಗೆ ನಂತರ	116.72	107.45	146.31	177.83	314.66	(14.24)	(7.52)	0.20	(68.78)	60.61
ಒಟ್ಟು ಸಮಗ್ರ ಆದಾಯ/(ನಷ್ಟ)	109.28	54.68	242.90	128.12	459.27	(14.23)	(7.52)	(0.14)	(68.77)	60.36
ಈಕ್ವಿಟಿ ಷೇರ್ ಬಂಡವಾಳ	497.04	497.02	496.80	497.04	496.80	497.04	497.02	496.80	497.04	496.80
ಇನ್ನಿತರೇ ಈಕ್ವಿಟಿ	-	-	-	2,875.42	2,775.34	-	-	-	2,367.07	2,433.80
ಪ್ರತಿ ಷೇರಿನ ಗಳಿಕೆ (ಪ್ರತಿ ಐಎನ್‌ಆರ್ ಮುಖಬೆಲೆಯ 10)	ವಾರ್ಷಿಕವಲ್ಲದ್ದು	ವಾರ್ಷಿಕವಲ್ಲದ್ದು	ವಾರ್ಷಿಕವಲ್ಲದ್ದು	ವಾರ್ಷಿಕದ್ದು	ವಾರ್ಷಿಕದ್ದು	ವಾರ್ಷಿಕವಲ್ಲದ್ದು	ವಾರ್ಷಿಕವಲ್ಲದ್ದು	ವಾರ್ಷಿಕವಲ್ಲದ್ದು	ವಾರ್ಷಿಕದ್ದು	ವಾರ್ಷಿಕದ್ದು
ಬೇಸಿಕ್	2.12	1.86	2.61	2.97	5.51	(0.29)	(0.15)	0.01	(1.38)	1.21
ಡೈಲ್ಯೂಟೆಡ್	2.12	1.86	2.61	2.97	5.50	(0.29)	(0.15)	0.01	(1.38)	1.21

2021 ರ 31 ನೇ ಮಾರ್ಚ್ ಕೊನೆಯ ವರ್ಷದ ಹಾಗೂ ತ್ರೈಮಾಸಿಕ ಹಣಕಾಸಿನ ಕ್ರೋಢೀಕರಿಸಿದ ಹಾಗೂ ಸ್ವತಂತ್ರ್ಯ ಹಣಕಾಸು ಲೆಕ್ಕ ಪರಿಶೋಧಿತ ವರದಿಗಳ ಫಲಿತಾಂಶಗಳನ್ನು ಜೂನ್ 22, 2021 ರಂದು ಕಂಪನಿಯ ಲೆಕ್ಕ ಪರಿಶೋಧಕ ಸಮಿತಿಯಿಂದ ಪರಿಷ್ಕರಿಸಲ್ಪಟ್ಟಿದೆ ಹಾಗೂ ಜೂನ್ 22, 2021 ರಂದು ನಡೆದ ಮಂಡಳಿಯ ನಿರ್ದೇಶಕರುಗಳ ಸಮ್ಮುಖದಲ್ಲಿ ಅನುಮೋದಿತ ಗೊಂಡಿದೆ.

ಮೇಲೆ ತಿಳಿಸಿರುವ ತ್ರೈಮಾಸಿಕ ಹಣಕಾಸು ಫಲಿತಾಂಶದ ವಿವರವಾದ ಕೋಷ್ಠಕದ ನಮೂನೆಯ ಸಾರಾಂಶವನ್ನು 2015 ರ SEBI 33ನೇ ನಿಯಂತ್ರಣದನುಸಾರ (Listing Obligations and Disclosure Requirements) ಸ್ಟಾಕ್ ಎಕ್ಸ್‌ಚೇಂಜ್ ನಲ್ಲಿ ಸಲ್ಲಿಸಲಾಗಿದೆ. ತ್ರೈಮಾಸಿಕ ಹಣಕಾಸಿನ ವರದಿಯ ಸಂಪೂರ್ಣ ಕೋಷ್ಠಕದ ನಮೂನೆಯು ಕಂಪನಿಯ ವೆಬ್ ಸೈಟ್: www.asterdmhealthcare.com/investors ಹಾಗೂ https://www.bseindia.com/ BSE ಹಾಗೂ https:// www.nseindia.com/ NSE ವೆಬ್ ಸೆಟ್‌ಗಳಲ್ಲಿ ಲಭ್ಯವಿದೆ.

ಕಂಪನಿಯ ಕಾನೂನಾತ್ಮಕ ಆಡಿಟರ್‌ಗಳಾದ Deloitte Haskins & Sells, ರಂತೆ ಈ ವರದಿಯನ್ನು ಲೆಕ್ಕಪರಿಶೋಧನೆ ಮಾಡಲಾಗಿದೆ ಹಾಗೂ ಸದರಿ ಲೆಕ್ಕ ಪರಿಶೋಧಕ ವರದಿಯನ್ನು ಯಾವುದೇ ರೀತಿ ಮಾರ್ಪಾಡಿಸಲಾಗಿಲ್ಲ.

ಆಸ್ಟರ್ ಡಿಎಂ ಹೆಲ್ತ್ ಕೇರ್ ಲಿಮಿಟೆಡ್ ಪರವಾಗಿ
ಸಹಿ/-
ಡಾ. ಆಝಾದ್ ಮೂಪೆನ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು
DIN : 00159403

ಸ್ಥಳ : ದುಬೈ
ದಿನಾಂಕ : ಜೂನ್ 22, 2021

ದಿಗ್ವಿಜಯ 24X7 NEWS DIGHVIJAY
ಕನ್ನಡಿಗರ ಧ್ವನಿ

ಇಂದಿನ ಕಾರ್ಯಕ್ರಮಗಳು

ಶುಭೋದಯ ಕರ್ನಾಟಕ	:	ಬೆಳಗ್ಗೆ 5.57 ಕ್ಕೆ
ಸಂಸ್ಕೃತಿ	:	ಬೆಳಗ್ಗೆ 6.15 ಕ್ಕೆ
ನೇಗಿಲಯೋಗಿ	:	ಬೆಳಗ್ಗೆ 6.27 ಕ್ಕೆ
ನಮಸ್ತೆ ಕರ್ನಾಟಕ	:	ಬೆಳಗ್ಗೆ 6.57 ಕ್ಕೆ ಮತ್ತು ಸಂಜೆ 5.57 ಕ್ಕೆ
30 ನಿಮಿಷ, 60 ಸುದ್ದಿ	:	ಬೆಳಗ್ಗೆ 7.27 ಕ್ಕೆ ಮತ್ತು ಸಂಜೆ 4.57 ಕ್ಕೆ
ಸ್ಪೋರ್ಟ್ಸ್ ಕ್ಲಬ್	:	ಬೆಳಗ್ಗೆ 7.57 ಕ್ಕೆ
ಬ್ರೇಕಿಂಗ್ ಬುಲೆಟಿನ್	:	ಬೆಳಗ್ಗೆ 8.27 ಕ್ಕೆ
MID DAY NEWS	:	ಮಧ್ಯಾಹ್ನ 12.57 ಕ್ಕೆ
ಮೂರನೇ ಕಣ್ಣು	:	ಸಂಜೆ 5.27 ಕ್ಕೆ
ಸಿನಿ STAR	:	ಸಂಜೆ 6.27 ಕ್ಕೆ
ದಿ ಮೇಜರ್ ಸ್ಟೋರಿ	:	ಸಂಜೆ 6.57 ಕ್ಕೆ
ರೆಡ್ ಅಲರ್ಟ್	:	ರಾತ್ರಿ 7.27 ಕ್ಕೆ
D FOCUS	:	ರಾತ್ರಿ 7.57 ಕ್ಕೆ
ನ್ಯೂಸ್ OUTLOOK	:	ರಾತ್ರಿ 8.27 ಕ್ಕೆ
INSIDE ಸ್ಟೋರಿ	:	ರಾತ್ರಿ 9.27 ಕ್ಕೆ
BIG ಬೆಂಗಳೂರು	:	ರಾತ್ರಿ 9.57 ಕ್ಕೆ
ದಿ SPECIAL	:	ರಾತ್ರಿ 10.27 ಕ್ಕೆ
DAY ROUND UP	:	ರಾತ್ರಿ 10.57 ಕ್ಕೆ

*ಕೊನೆ ಕ್ಷಣದ ಬದಲಾವಣೆ ಹೊರತಾಗಿ
ಪ್ರಸಾರದ ಸಮಸ್ಯೆಗಳಿಗೆ ಸಂಪರ್ಕಿಸಿ:
76249 65333 / 88844 32303 / 080-22537345
CIN: U92113KA2007PLC043480
VRL MEDIA LIMITED

ಆರೋಗ್ಯಕರ ಜೀವನ ಶೈಲಿಗೆ ಯೋಗ ಮಾಡಿ

ಬೆಂಗಳೂರು: ಆರೋಗ್ಯಕರ ಜೀವನಶೈಲಿಗಾಗಿ ಪ್ರತಿನಿತ್ಯ ಯೋಗ ಮಾಡಬೇಕು ಎಂದು ಈಶ ಫೌಂಡೇಷನ್ ಸಂಸ್ಥಾಪಕ ಸದ್ಗುರು ಸಲಹೆ ನೀಡಿದ್ದಾರೆ.

ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಹಿನ್ನೆಲೆಯಲ್ಲಿ ಈಶ ಫೌಂಡೇಷನ್ ಸಹಯೋಗದಲ್ಲಿ ಇಂಡಿಯನ್ ಬ್ಯಾಂಕ್ ವೆಬಿನಾರ್‌ನಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದರು.

ದೇಹ ಮತ್ತು ಮನಸ್ಸಿನ ನಡುವಿನ ಸಾಮರಸ್ಯ ಸಾಧಿಸಲು, ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅನ್ವೇಷಣೆಯನ್ನು ಒಟ್ಟುಗೂಡಿಸುವ ಉದ್ದೇಶದಿಂದ ಭಾರತ 15 ಸಾವಿರ ವರ್ಷಗಳ ಹಿಂದೆಯೇ ಯೋಗವನ್ನು ಆರಂಭಿಸಿತು ಎಂದರು.

» ಯೋಗ ದಿನ ಕಾರ್ಯಕ್ರಮದಲ್ಲಿ ಸದ್ಗುರು ಸಲಹೆ

ಇಂಡಿಯನ್ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಕೆ. ರಾಮಚಂದ್ರನ್ ಮಾತನಾಡಿ, ಭಾರತೀಯ ಯೋಗವನ್ನು ವಿವಿಧ ರೂಪಗಳಲ್ಲಿ ಅಭ್ಯಾಸ ಮಾಡಬಹುದು. ಇದು ನಿಧಾನವಾಗಿ ಜಗತ್ತಿನಾದ್ಯಂತ ಜನಪ್ರಿಯತೆ ಗಳಿಸುತ್ತಿದೆ. ಒತ್ತಡ ಕಡಿಮೆಗೊಳಿಸಲು, ರೋಗನಿರೋಧಕ ಶಕ್ತಿ ಹೆಚ್ಚಿಸಲು ಹಾಗೂ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕಾಗಿ ಯೋಗ ಸಹಾಯ ಮಾಡುತ್ತದೆ ಎಂದರು.

ವರ್ಚುವಲ್ ಕಾರ್ಯಕ್ರಮವನ್ನು ಬ್ಯಾಂಕ್‌ನ ಯೂಟ್ಯೂಬ್ ಚಾನೆಲ್‌ನಲ್ಲಿ ನೇರ ಪ್ರಸಾರ ಮಾಡಲಾಯಿತು. ಬ್ಯಾಂಕ್‌ನ ಎಂಡಿ ಎಂ.ಎಸ್. ಪದ್ಮಜಾ ಚಂಡೂರ್, ಕಾರ್ಯನಿರ್ವಾಹಕ ನಿರ್ದೇಶಕರಾದ ವಿ.ವಿ. ಶೆಣೈ, ಇಮ್ರಾನ್ ಅಮೀನ್ ಸಿದ್ದಿಕಿ ಉಪಸ್ಥಿತರಿದ್ದರು. ಬ್ಯಾಂಕಿನ ಸಿಬ್ಬಂದಿ, ಅವರ ಕುಟುಂಬ ಸದಸ್ಯರು ಯೋಗ ಮಾಡಿ ಗಮನ ಸೆಳೆದರು.

ನ್ಯೂಸ್ ಲೈನ್ ಬೆಂಗಳೂರು: ಹಬ್ಬಗಳ ಸಂದರ್ಭದಲ್ಲಿ ಎತ್ತಿನ ಬಂಡಿ ಓಟದ ಸ್ಪರ್ಧೆ ಆಯೋಜಿಸುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಪಿಐಎಲ್ ಸಂಬಂಧ ಸರ್ಕಾರ ಹಾಗೂ ಮಂಡ್ಯ ಜಿಲ್ಲಾಧಿಕಾರಿಗೆ ಸಿಜೆ ನೇತೃತ್ವದ ಹೈಕೋರ್ಟ್ ನ್ಯಾಯಪೀಠ ನೋಟಿಸ್ ಜಾರಿಗೊಳಿಸಿದೆ.